

# ಎಂದೆಂದೂ ನವನವೀನ!
# ನಯಾಗರ



ಮರಳಿ ಊರಿಗೆ ಬಂದರೂ ಕಣ್ಣಮುಂದೆ ಭೋರ್ಗರೆಯುತ್ತಿದೆ ನಯಾಗರ ಜಲಪಾತ!

ಚಿತ್ರ– ಲೇಖನ:
**ಸಂಜೀವ ಹಿರೇಮಠ**

ಎತ್ತರದಿಂದ ಧುಮಕುವ ಜಲಪಾತ ಅದ್ಭುತ. ನೀರು ಹಾಲಾಗಿ ಆರ್ಭಟದಿಂದ ಕೆಳಗಿಳಿಯುವ ದೃಶ್ಯ ನೋಡಲು ಎರಡು ಕಣ್ಣು ಸಾಲದು. ಪೂರ್ವ ಅಮೆರಿಕದ ಪ್ರಖ್ಯಾತ ಪ್ರವಾಸಿ ತಾಣ ನಯಾಗರ ಜಗತ್ತಿನ ಅಪೂರ್ವ ಸೊಬಗುಳ್ಳ ಜಲಪಾತ. ‘ನಯಾಗರ ಫಾಲ್ಸ್’ ಎಂದೇ ಪ್ರಸಿದ್ಧ.

ಈ ಜಗತ್ಪ್ರಸಿದ್ಧ ಜಲಪಾತ ನೋಡಲು ಅವಕಾಶ ಸಿಕ್ಕಿದ್ದು ಇದೇ ಮೇ ತಿಂಗಳ ಕೊನೆಯ ದಿನ. ಪ್ಯಾಕೇಜ್ ಪ್ರವಾಸದ ಅಂಗವಾಗಿ ಪತ್ನಿ ಮತ್ತು ಸೋದರ ಸಂಬಂಧಿಗಳೊಂದಿಗೆ ಹೋಗಿದ್ದೆ. ಪ್ರವಾಸದ ಪಟ್ಟಿ ವಾಷಿಂಗ್ಟನ್ ಮುಖಾಂತರ ನಯಾಗರ ಎಂದಿತ್ತು. ವಾಷಿಂಗ್ಟನ್ ನಗರದ ಸೌಂದರ್ಯ ನೋಡಿ ಚಕಿತರಾಗಿದ್ದೆವು. ನಮ್ಮ ಮುಂದಿನ ತಾಣ ನಯಾಗರ. ಎಲ್ಲರೂ ಜಲಪಾತ ನೋಡಲು ಉತ್ಸುಕರಾಗಿದ್ದರು. ಅದೇ ದಾರಿಯಲ್ಲಿ ಬರುವ ಹರ್ಶೆಯಲ್ಲಿನ ವಿಶ್ವವಿಖ್ಯಾತ ಚಾಕೊಲೇಟ್ ಫ್ಯಾಕ್ಟರಿಯಲ್ಲಿ ಭಾರೀ ಪ್ರಮಾಣದಲ್ಲಿ ಚಾಕೊಲೇಟ್ ಸಂಸ್ಕರಿಸುವ ಪರಿ ನೋಡಿದ್ದೆವು. ವಿವಿಧ ಚಾಕೊಲೇಟ್‌ಗಳ ಸಿಹಿ ಸವಿದು, ರಾತ್ರಿ ಕಾರ್ನಿಂಗ್ ಎಂಬ ಊರಲ್ಲಿ ತಂಗಿದ್ದೆವು.

ಬೆಳಿಗ್ಗೆ ತಿಂಡಿ ಮುಗಿಸಿದ ಬಳಿಕ ಜಲಪಾತ ನೋಡಲು ಪ್ರಯಾಣ ಮುಂದುವರೆಯಿತು. ಇದೊಂದು ಮರೆಯಲಾಗದ ಪ್ರಯಾಣ. ರಸ್ತೆಯ ಎರಡೂ ಬದಿಯಲ್ಲಿ ಹಸಿರಿನ ಮರ ಗಿಡಗಳು. ಅರಣ್ಯದ ನಡುವೆ